Janathavani 13-02-2022

# ಪ್ರೆಷರ್ ಪ್ರೊಫೈಲ್ ಕಂಪನಿ ಜೊತೆಗೆ ಬಿಐಇಟಿ ಒಡಂಬಡಿಕೆ



ದಾವಣಗೆರೆ, ಫೆ.12- ಯಾವುದೇ ಒಂದು ಮಹಾವಿದ್ಯಾಲಯದ ವಿದ್ಯಾರ್ಥಿಗಳ ಶಿಕ್ಷಣ ಗುಣಮಟ್ಟವು ಆ ವಿದ್ಯಾಲಯವು ಉನ್ನತ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳೊಂದಿಗೆ ಹೊಂದಿರುವ ಸಂಬಂಧದ ಮೇಲೆ ನಿರ್ಧಾರವಾಗುತ್ತದೆ. ಈ ದಿಸೆಯಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬಿಐಇಟಿ ಕಾಲೇಜು ಬೆಂಗಳೂರಿನ ಪ್ರೆಷರ್ ಪ್ರೊಫೈಲ್ ಕಂಪನಿಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ.

ಈ ಕಂಪನಿಯು ಒಂದು ಆನ್‌ಲೈನ್ ಉದ್ಯೋಗ ಪೋರ್ಟಲ್ ಆಗಿದ್ದು, ತಾಂತ್ರಿಕ ಕಾಲೇಜಿನ ಹಳೆಯ ವಿದ್ಯಾರ್ಥಿಗಳನ್ನು ಒಂದು ಗೂಡಿಸಲು ಮತ್ತು ಕಾರ್ಪೊರೇಟ್ ಕಂಪನಿಗಳಲ್ಲಿ ನೇಮಕಾತಿಗೊಳಿಸಲು ಇರುವ ತಂತ್ರಾಂಶವಾಗಿದೆ.

ಈ ಸಂಸ್ಥೆಯನ್ನು ಬಿಐಇಟಿ ಕಾಲೇಜಿನ ಹಳೆಯ ವಿದ್ಯಾರ್ಥಿಗಳಾದ ಶಿವಕುಮಾರ್ ಕಂಬಳಿಮಠ್ ಹಾಗೂ ಸಂತೋಷ್ ನವಲೆ ಇವರು ಪ್ರಾರಂಭಿಸಿ, ಉದ್ಯಮವಾಗಲು ಶ್ರಮಿಸಿದ್ದಾರೆ.

ಕಳೆದ 10 ರಂದು ನಡೆದ ಒಡಂಬಡಿಕೆ ಕಾರ್ಯಕ್ರಮದಲ್ಲಿ ಕಾಲೇಜಿನ ನಿರ್ದೇಶಕರಾದ ಪ್ರೊ. ವೈ.ವೃಷಭೇಂದ್ರಪ್ಪ, ಪ್ರಾಚಾರ್ಯ ಡಾ.ಎಚ್.ಬಿ. ಅರವಿಂದ್, ನಿಯೋಜನ ಡೀನ್ ಡಾ.ಸಿ.ಆರ್. ನಿರ್ಮಲ, ಮೆಕ್ಯಾನಿಕಲ್ ವಿಭಾಗದ ಪ್ರಮುಖ ಡಾ. ಮಾನವೇಂದ್ರ ಹಾಗೂ ಅಲುಮ್ನಿ ಡೀನ್ ಡಾ. ದೇವೇಂದ್ರಪ್ಪ ಮತ್ತು ಪ್ರೆಷರ್ ಪ್ರೊಫೈಲ್ ಕಂಪನಿಯ ಪರವಾಗಿ ಶಿವಪ್ರಕಾಶ್ ಹಾಗೂ ಸಂತೋಷ್ ಅವರುಗಳು ಒಡಂಬಡಿಕೆಗೆ ಸಹಿ ಹಾಕಿದರು. ಕು.ವೈಷ್ಣವಿ ಸ್ವಾಗತಿಸಿದರೆ, ಪ್ರೊ.ಸಂತೋಷ್ ವಂದಿಸಿದರು.

ಪ್ರಸ್ತುತ ವರ್ಷ 20 ವಿದ್ಯಾರ್ಥಿಗಳಿಗೆ ಗ್ರೇನ್ ಟೆಕ್ ಮತ್ತು ಈನ್ಯೊಬ್ ಸಾಫ್ಟ್‌ವೇರ್ ಸಲೂಷನ್ಸ್ ಕಂಪನಿಗಳಲ್ಲಿ ಉದ್ಯೋಗ ಒದಗಿಸಿದೆ.

Nagaravavi



# ಫ್ರೆಷರ್ ಪ್ರೊಫೈಲ್ ಕಂಪನಿಯೊಂದಿಗೆ ಬಿಐಇಟಿ ಒಡಬಂಡಿಕೆ



ದಾವಣಗೆರೆ,ಫೆ.12 : ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬೆಂಗಳೂರಿನ ಫ್ರೆಷರ್ ಪ್ರೊಫೈಲ್ ಕಂಪನಿಯೊಂದಿಗೆ ಒಡಂಬಡಿಕೆಯೊಂದಕ್ಕೆ ಸಹಿ ಹಾಕಿದೆ.

ಇದೇ ವೇಳೆ ಮಾತನಾಡಿದ ಕಾಲೇಜಿನ ಪ್ರಾಂಶುಪಾಲ ಡಾ॥ ಎಚ್.ಬಿ. ಅರವಿಂದ್ ಕಂಪನಿಯು ಆನ್‌ಲೈನ್ ಉದ್ಯೋಗ ಪೋರ್ಟಲ್ ಆಗಿದ್ದು, ತಾಂತ್ರಿಕ ಕಾಲೇಜುಗಳ ಹಳೆಯ ವಿದ್ಯಾರ್ಥಿಗಳನ್ನು ಒಂದುಗೂಡಿಸಲು ಮತ್ತು ಕಾರ್ಪೊರೇಟ್ ಕಂಪನಿಗಳಲ್ಲಿ ವಿದ್ಯಾರ್ಥಿಗಳಿಗೆ ನೇಮಕಾತಿಗೊಳಿಸಲು ತಂತ್ರಾಂಶವಾಗಿದ್ದು, ಈ ಸಂಸ್ಥೆಯನ್ನು ಬಿಐಇಟಿ ಕಾಲೇಜಿನ ಹಿರಿಯ ವಿದ್ಯಾರ್ಥಿಗಳಾದ ಶಿವಕುಮಾರ ಕಂಬಳಿಮಠ ಹಾಗೂ ಸಂತೋಷ್ ಅವರು ಪ್ರಾರಂಭಿಸಿ ಇದೊಂದು ಯಶಸ್ವಿ ಉದ್ಯಮವಾಗಲು ಶ್ರಮಿಸಿದ್ದಾರೆ ಎಂದು ತಿಳಿಸಿದರು.

ಪ್ರಸ್ತುತ ವರ್ಷ ಈ ಕಂಪನಿಯು ಕಾಲೇಜಿನ 20 ವಿದ್ಯಾರ್ಥಿಗಳಿಗೆ ಗ್ರೇನ್ ಟೆಕ್ ಮತ್ತು ಈ ನ್ಯೂಬ್ ಸಾಫ್ಟ್‌ವೇರ್ ಸಲ್ಯೂಷನ್ ಕಂಪನಿಗಳಲ್ಲಿ ಉದ್ಯೋಗಾವಕಾಶ ಒದಗಿಸಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬಿ.ಐ.ಐ.ಟಿ. ನಿರ್ದೇಶಕರಾದ ಪ್ರೊ.ವೈ. ವೃಷಭೇಂದ್ರಪ್ಪ, ಡೀನ್ ಡಾ॥ ಸಿ.ಆರ್.ನಿರ್ಮಲ, ಮೆಕ್ಯಾನಿಕಲ್ ವಿಭಾಗ ಪ್ರಮುಖ ಡಾ.ಮಾನವೇಂದ್ರ ಹಾಗೂ ಅಲುಮ್ನಿ ಡೀನ್ ಡಾ॥ ದೇವೇಂದ್ರಪ್ಪ ಫ್ರೆಷರ್ ಪ್ರೊಫೈಲ್ ಕಂಪನಿಯ ಶಿವಪ್ರಕಾಶ್ ಹಾಗೂ ಸಂತೋಷ್ ಇವರು ಭಾಗವಹಿಸಿದ್ದರು. ಕು. ವೈಷ್ಣವಿ ಸ್ವಾಗತಿಸಿದರು, ಪ್ರೊ ಸಂತೋಷ್ ವಂದಿಸಿದರು.

kannadaprabha 13-02-2022



ದಾವಣಗೆರೆ ನಗರದ ಬಿಐಇಟಿ ಕಾಲೇಜು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬೆಂಗಳೂರಿನ ಫ್ರೆಷೆರ್ ಪ್ರೊಫೈಲ್ ಕಂಪನಿಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ. ಕಾಲೇಜಿನ ಸಿಬ್ಬಂದಿ ಹಾಗೂ ಕಂಪನಿಯ ಶಿವಪ್ರಕಾಶ, ಸಂತೋಷ ಒಡಂಬಡಿಕೆಗೆ ಸಹಿ ಹಾಕಿದರು.

vijayavani 13-02-2022

ವಿಜಯವಾಣಿ ಚಿತ್ರ



ದಾವಣಗೆರೆ ಬಿಐಇಟಿ ಕಾಲೇಜು, ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬೆಂಗಳೂರಿನ ಫ್ರೆಷರ್ ಪ್ರೊಫೈಲ್ ಕಂಪನಿ ಜತೆ ಒಡಂಬಡಿಕೆ ಮಾಡಿಕೊಂಡಿದ್ದು ಒಪ್ಪಂದ ಪತ್ರ ವಿನಿಮಯ ಮಾಡಿಕೊಳ್ಳಲಾಯಿತು. ಪ್ರಾಂಶುಪಾಲ ಡಾ.ಎಚ್.ಬಿ.ಅರವಿಂದ್, ಫ್ರೆಷರ್ ಪ್ರೊಫೈಲ್ ಕಂಪನಿ ಪ್ರತಿನಿಧಿಗಳಾದ ಶಿವಪ್ರಕಾಶ್, ಸಂತೋಷ್, ಬಿಐಇಟಿ ನಿರ್ದೇಶಕ ಪ್ರೊ.ವೈ.ವೃಷಭೇಂದ್ರಪ್ಪ, ಡೀನ್ ಡಾ.ಸಿ.ಆರ್.ನಿರ್ಮಲಾ, ಮೆಕ್ಯಾನಿಕಲ್ ವಿಭಾಗ ಪ್ರಮುಖ ಡಾ.ಮಾನವೇಂದ್ರ, ಡಾ.ದೇವೇಂದ್ರಪ್ಪ ಇದ್ದರು.